ವಿಡಿಯೋವನ್ನು ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ನನ್ನ ಜೊತೆಗೆ ಚಾಸಾ:2 ಇದ್ದರು.

**– ಪಾಟೀ ಸವಾಲು – ಆರೋಪಿಯ ಪರವಾಗಿ ಶ್ರೀಮತಿ ಎಂ.ಬಿ. ವಕೀಲರಿಂದ –**

(ಆರೋಪಿಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

ಸಾಕ್ಷಿಯನ್ನು ದಿ. 10.6.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಪಾಟೀಸವಾಲು – ಆರೋಪಿಪರ ಶ್ರೀ ಎಸ್.ಸಿ.ಆರ್. ವಕೀಲರಿಂದ –**

ನನಗೆ ಓದಲು ಬರೆಯಲು ಬರುತ್ತದೆ. ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ನಾನು ಈಗ ಆದಿವಾಲಾ ಗ್ರಾ.ಪಂ. ಸದಸ್ಯ ಎಂದರೆ ಸರಿ. ನಾನು ಗ್ರಾ.ಪಂ. ಸದಸ್ಯನಾಗಿರುವುದರಿಂದ ಪೋಲಿಸ್ ಠಾಣೆಗೆ ಮತ್ತು ಇತರೆ ಸರಕಾರಿ ಕಚೇರಿಗಳಿಗೆ ಹೋಗುವುದು-ಬರುವುದು ಮಾಡುತ್ತೇನೆ ಎಂದರೆ ಸರಿ. ಎಸ್.ಸಿ. ನಂ. 1/2026 ರಲ್ಲಿ ನಾನು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ.

ಇಂತವರು ಸ್ಥಳದಲ್ಲಿ ಇರುತ್ತಾರೆ, ಇಂತಹ ವಿಷಯಕ್ಕೆ ಸಾಕ್ಷಿಯಾಗಿ ಬರಬೇಕು ಎಂದು ನನಗೆ ನೋಟೀಸನ್ನು ನೀಡಿರಲಿಲ್ಲ. ಚಾಸಾ-2 ಗ್ರಾ.ಪಂ. ಸದಸ್ಯರು ಎಂದರೆ ಸರಿ. ನಮಗೆ ಜಾಗ ಸರಿಯಾಗಿ ಗೊತ್ತಿಲ್ಲ

ಎಂದರೆ ಸರಿಯಲ್ಲ. ಸದರಿ ಜಮೀನಿನ ಚಕ್ಕುಬಂದಿಯನ್ನು ನಿಖರವಾಗಿ ಹೇಳಲು ಬರುವುದಿಲ್ಲ. ಸದರಿ ಸ್ಥಳ ಜನನಿಬಿಡ ಸ್ಥಳ ಎಂದರೆ ಸರಿಯಲ್ಲ. 13.12.2024 ರಂದು ಪೋಲಿಸರು ನನ್ನನ್ನು ಕರೆಯಿಸಿದ್ದರು. ನನ್ನ ಜನ್ಮ ದಿನಾಂಕ 1.6.1986. ಪೋಲಿಸ್ ಠಾಣೆಯಲ್ಲಿ ನನ್ನ 2-3 ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಮಹಜರ ಮಾಡಿದ್ದ ಬಗ್ಗೆ ಪ್ರತ್ಯೇಕವಾದ ಹೇಳಿಕೆಯನ್ನು ಮಾಡಿಕೊಂಡಿರುತ್ತಾರೆ. ಆದಿವಾಲಾ ಗ್ರಾಮಕ್ಕೂ ಚಾಸಾ:10 ರವರ ಜಮೀನಿಗೂ ಸುಮಾರು 2 ಕಿ.ಮೀ. ದೂರ ಇರುತ್ತದೆ. ಸ್ಥಳದಲ್ಲಿ ಬಿದ್ದಿದ್ದ ಚಪ್ಪಲಿಯನ್ನು ಸುಕೋ ಅಧಿಕಾರಿಗಳು ಪಡೆದುಕೊಂಡರು. ಚಪ್ಪಲಿಯನ್ನು ತೆಗೆದುಕೊಂಡು ಸೀಲು ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನನ್ನ ಮತ್ತು ಚಾಸಾ:2 ರವರ ಸಹಿಯನ್ನು ಬಿಟ್ಟು ಬೇರೆ ಯಾರ ಸಹಿಯನ್ನು ಪಡೆದಿರುತ್ತಾರೆ ಎಂದು ನನಗೆ ಗೊತ್ಇತಲ್ಲ. ಆದರೆ ಅಲ್ಲಿ ಒಬ್ಬ ಜೆ.ಸಿ.ಬಿ. ಡ್ರೈವರ್ ಒಬ್ಬರು ಇದ್ದರು. ನನ್ನ ಸಮಕ್ಷಮ ಚಾಸಾ:9 ರವರ ಸಹಿಯನ್ನು ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಚಪ್ಪಲಿಗಳು ಚಾಸಾ:9 ರವರಿಗೆ ಸಂಬಂಧಿಸಿದ್ದು ಇರುತ್ತವೆ. ಜಮೀನಿಗೆ ಸುತ್ತ ತಂತಿ ಬೇಲಿ ಇದೆ ಎಂದರೆ ಸರಿ. ಸದರಿ ಜಮೀನಿಗೆ ಒಂದು ಗೇಟ್ ಇದ್ದು, ಅದಕ್ಕೆ ಬೀಗ ಹಾಕಿರುತ್ತಾರೆ ಎಂದರೆ ಸರಿ. ಸ್ಥಳದಲ್ಲಿ ವಸ್ತುಗಳು ಸ್ವಲ್ಪ ದೂರದಲ್ಲಿ ಬಿದ್ದಿದ್ದವು. ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ, ಗ್ರಾ.ಪಂ. ಸದಸ್ಯನಾಗಿರುವುದರಿಂದ ಪದೇ-ಪದೇ ಠಾಣೆಗೆ ಹೋಗುವುದರಿಂದ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ:3 ರಲ್ಲಿ ಚಪ್ಪಲಿ ವಶಪಡಿಸಿಕೊಳ್ಳುವುದು ಕಾಣಿಸುತ್ತಿಲ್ಲ ಎಂದರೆ ಸರಿ. ರಕ್ತ ಮಿಶ್ರಿತ ಮಣ್ಣು ವಿಡಿಯೋದಲ್ಲಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ವಿಡಿಯೋದಲ್ಲಿ ರಾಡ್ ವಶಪಡಿಸಿಕೊಳ್ಳುತ್ತಿರುವುದು ಕಾಣುತ್ತಿಲ್ಲ ಎಂದರೆ ಸರಿ. ಪೋಲಿಸ್ ಸಿಬ್ಬಂದಿ ವಿಡಿಯೋ ಮಾಡಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ವಿಡಿಯೋ ಮಾಡಿದ ಪ್ರದೇಶ ಬಯಲು ಪ್ರದೇಶ ಎಂದರೆ ಸರಿ. ಸದರಿ ಜಮೀನಿನಲ್ಲಿ ಹುಲ್ಲು, ಸಪ್ಪೆ ಬೆಳೆದಿರುವ ಪ್ರದೇಶ ಎಂದರೆ ಸರಿ. ನಮ್ಮ ಮನೆಯಿಂದ ಮಹಜರ ಮಾಡಿದ ಸ್ಥಳ 2 ಕಿ.ಮೀ. ದೂರದಲ್ಲಿದೆ. ನಾನು ದ್ವಿಚಕ್ರ

ವಾಹನದಲ್ಲಿ ಹೋಗಿರುತ್ತೇನೆ. ನಾನು ಹೋಗುವಷ್ಟರಲ್ಲಿ ಪೋಲಿಸರು ಅಲ್ಲಿ ಹೋಗಿದ್ದರು ಎಂದರೆ ಸರಿ. ನಾನು ಮಹಜರಿಗೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ.

ಆರೋಪಿಪರ ವಕೀಲರ ಕೋರಿಕೆಯ ಮೇರೆಗೆ – ಈ ಸಮಯದಲ್ಲಿ ನ್ಯಾಯಾಲಯದ ಕಂಪ್ಯೂಟರ್ ಸಿಬ್ಬಂದಿ ಮಿಥುನ್ ಕುಮಾರ ಅವರ ಸಹಾಯದಿಂದ ಡಿವಿಡಿಯನ್ನು ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.